ಸಿ.ಸಿ. ನಂ ಃ**90/2025**
ಪಿ.ಡಬ್ಲ್ಯೂ - **01**

ದಿನಾಂಕಃ **17/03/2026** ರಂದು ಪ್ರಮಾಣವಚನ ಬೋಧಿಸಲಾಯಿತು.

ಮುಂದುವರಿದ ಮುಖ್ಯ ವಿಚಾರಣೆ ಃ ಮಾನ್ಯ ಎಪಿಪಿ ಯವರಿಂದ ಃ:

ದಿಃ 30/04/2017 ರಂದು ನನಗೆ ಕರಾರು ಪತ್ರಕ್ಕೆ ಸಹಿ ಮಾಡಿಸಿಕೊಂಡ ಜಾಗ ಹಾಗೂ ನನ್ನ ಮೇಲೆ ಹಲ್ಲೆ ಮಾಡಿದ ಸಂಬಂದ ಸದರಿ ಸ್ಥಳಗಳು ಸುಮಾರು 200 ಮೀಟರ್ ಅಂತರದಲ್ಲಿದ್ದು, ನನ್ನ ಸಮಕ್ಷಮ ಸದರಿ ಸ್ಥಳಗಳ ಮಹಜರನ್ನು ಜರುಗಿಸಿರುತ್ತಾರೆ ಹಾಗೂ ಆ ಕಾಲಕ್ಕೆ ಸದರಿ ಸ್ಥಳದ ಭಾವಚಿತ್ರಗಳನ್ನು ತೆಗೆದಿರುತ್ತಾರೆ. ನನ್ನ ಮೇಲೆ ಹಲ್ಲೆ ಮಾಡಿದ ಸ್ಥಳವು ರಾಮ್ಕೋ ಸಿಮೆಂಟ್ ಲಿಮಿಟೆಡ್ ಇವರಿಗೆ ಸಂಬಂಧಿಸಿದ ಜಾಗ ಇರುತ್ತದೆ. ದಿಃ 19/04/2017 ರಂದು ಲಲಿತ್ ಅಶೋಕ್ ಹೋಟೆಲ್ ಬಳಿ ನನ್ನ ಹಾಗೂ ಚಾಸಾ 19 ಮತ್ತು 20 ರವರ ಸಮಕ್ಷಮ ಪೊಲೀಸರು ನಾನು 4 ನೇ ಆರೋಪಿಗೆ ದಿಃ 21/10/2016 ರಂದು ನಾನು 24 ಲಕ್ಷ ಹಣ ಹಾಗೂ ಇಂತಿಯಾಸ್ ನಿಂದ ರೂ. 6 ಲಕ್ಷ ಹಣ ಒಟ್ಟು 30 ಲಕ್ಷ ಹಣ ಹಾಗೂ ದಿಃ 28/10/2016 ರಂದು ನಾನು ಹಾಗೂ ಇಂತಿಯಾಸ್ ಸೇರಿ 51 ಲಕ್ಷ ಹಣವನ್ನು, ದಿಃ 19/12/2016 ರಂದು 20 ಲಕ್ಷ ಹಣವನ್ನು ನಮ್ಮ ತಂದೆ ಜೊತೆ ಹೋಗಿ ಕೊಟ್ಟ ಜಾಗ ಇದೇ ಎಂದು ತೋರಿಸಿದ ಮೇರೆಗೆ ಪೊಲೀಸರು ಮಹಜರನ್ನು ಮ.1.15 ರಿಂದ 2.00 ಗಂಟೆ ಅವಧಿಯಲ್ಲಿ ಜರುಗಿಸಿ ಆ ಕಾಲಕ್ಕೆ ಭಾವಚಿತ್ರವನ್ನು ತೆಗೆದಿರುತ್ತಾರೆ. ಈ ರೀತಿ ಒಟ್ಟಾಗಿ ನಾನು ರೂ.1 ಕೋಟಿ 1 ಲಕ್ಷ ಹಣವನ್ನು ರೈಸ್ ಪುಲ್ಲಿಂಗ್ ವ್ಯವಹಾರ ಮಾಡುವ ಸಂಬಂದ ಕೊಟ್ಟಿರುತ್ತೇನೆ.

2. ಅದೇ ದಿನ ವಿಂಡ್ಸನ್ ಮ್ಯಾನರ್ ಐ ಟಿ ಸಿ ಹೋಟೆಲ್ ನ ಮುಂಭಾಗ ನನ್ನನ್ನು ಕರೆದುಕೊಂಡು ಹೋಗಿದ್ದು, ಅಲ್ಲಿ ನನ್ನನ್ನು ಮಹಮ್ಮದ್ ರಫಿ ಹಾಗೂ ಅವರ ಸಹಾಯಕರನ್ನು ಪರಿಚಯ ಮಾಡಿದ ಸ್ಥಳ ಇದೇ ಎಂದು ನಾನು ತೋರಿಸಿದ ಮೇರೆಗೆ ಹಾಗೂ 45 ಲಕ್ಷ ಹಣವನ್ನು ತಮ್ಮ ಕಂಪನಿಗೆ ಕಟ್ಟಬೇಕಾಗುತ್ತದೆ ಎಂದು ಹಾಗೂ ತಾವು ಕಂಪನಿಯ ಪ್ರತಿನಿಧಿ ಎಂದು ಹೇಳಿದ ಜಾಗ ಅದೇ ಎಂದು ತೋರಿಸಿದ ಮೇರೆಗೆ ನನ್ನ ಹಾಗೂ ಚಾಸಾ 19 ಮತ್ತು 20 ರವರ ಸಮಕ್ಷಮ ಮ.3.30 ರಿಂದ 4.30 ರ ಅವಧಿಯಲ್ಲಿ ಮಹಜರನ್ನು ಜರುಗಿಸಿ, ಭಾವಚಿತ್ರಗಳನ್ನು ತೆಗೆದಿರುತ್ತಾರೆ.

3. ದಿಃ 31/03/2018 ರಂದು ತನಿಖಾಧಿಕಾರಿಯು ನನಗೆ ನೋಟೀಸು ನೀಡಿ ಹಣ ನೀಡಿದ ಸಂಬಂದ ನಿಮ್ಮ ಬಳಿ ಏನಾದರೂ ದಾಖಲೆಗಳು ಇದ್ದರೇ ಒದಗಿಸುವಂತೆ ಕೇಳಿದ್ದು, ನಾನು ದಿಃ 17/04/2018

ರಂದು ಅದಕ್ಕೆ ಸಂಬಂದಪಟ್ಟ ದಾಖಲೆಗಳನ್ನು ಹಾಗೂ ನನ್ನ ಹಾಗೂ ನನ್ನ ಹೆಂಡತಿಯ ಬ್ಯಾಂಕ್ ಖಾತೆಯ ಸ್ಟೇಟ್ಮೆಂಟ್ ಪ್ರತಿಯನ್ನು, ನನ್ನ ಅಣ್ಣ ಮತ್ತು ಸ್ನೇಹಿತರ ಬಳಿ ಹಣ ಪಡೆದಕೊಂಡಿದ್ದು ಅದಕ್ಕೆ ಸಂಬಂಧಿಸಿದ ಅವರ ದಾಖಲಾತಿಗಳನ್ನು, ನಮ್ಮ ತಂದೆಯ ಕಡೆಯಿಂದ 9 ಲಕ್ಷದ 30 ಸಾವಿರ ಹಣವನ್ನು ಪಡೆದುಕೊಂಡ ಬಗ್ಗೆ, ದಿಃ 28/10/2016 ರಂದು ನಮ್ಮ ತಂದೆ ವೃಷ್ಯಶುಂಗ ಅಡಿಕೆ ಮಂಡಿಯಿಂದ ರೂ.49,99,940/- ಇದಕ್ಕೆ ಸಂಬಂಧಿಸಿದ ಅಕೌಂಟ್ ಎಕ್ಸ್ಟ್ರಾಕ್ಟ್ ಪ್ರತಿ ಹಾಗೂ ನಮ್ಮತಂದೆ ತಮ್ಮ ಖಾತೆಯಿಂದ ನನಗೆ ರೂ. 50 ಲಕ್ಷ ಬಿಡಿಸಿಕೊಟ್ಟ ಬಗ್ಗೆ ಹಾಗೂ ಅದೇ ಮಂಡಿಯಿಂದ 50 ಸಾವಿರ ಹಣವನ್ನು ನಗದಾಗಿ ಪಡೆದುಕೊಂಡ ಬಗ್ಗೆ ದಾಖಲೆಯನ್ನು ನೀಡಿರುತ್ತಾರೆ. ಹೀಗೆ ಒಟ್ಟು 50,50,000/- ಹಣವನ್ನು ಸದರಿ ಮಂಡಿಯಿಂದ ಪಡೆದ ಬಗ್ಗೆ ದಾಖಲೆಯನ್ನು ತನಿಖಾಧಿಕಾರಿಗೆ ಕೊಟ್ಟಿರುತ್ತೇನೆ. ದಿಃ 19/12/2016 ರಂದು ರೂ.20 ಲಕ್ಷ ಹಣ ಕೊಟ್ಟಿದ್ದು ಅದರಲ್ಲಿ 10 ಲಕ್ಷ ನನ್ನ ಹೆಂಡತಿಯ ತಂದೆಯಿಂದ ಹಾಗೂ ಉಳಿದ 10 ಲಕ್ಷ ಹಣವನ್ನು ನನ್ನ ತಾಯಿಯ ತಮ್ಮ ಮಹಾಬಲ ರವರ ಕಡೆಯಿಂದ ಪಡೆದುಕೊಂಡಿದ್ದು ಆ ಬಗ್ಗೆ ದಾಖಲೆಯನ್ನು ಕೊಟ್ಟಿರುತ್ತೇನೆ.

4. ದಿಃ 08/01/2019 ರಂದು ನನ್ನ ಹಾಗೂ 2 ರಿಂದ 4ನೇ ಆರೋಪಿತರ ನಡುವೆ ಆದ ರೈಸ್ ಪುಲ್ಲಿಂಗ್ ವ್ಯವಹಾರಕ್ಕೆ ಸಂಬಂದಪಟ್ಟ ಹಾಗೆ ಮಾತನಾಡಿದ ಬಗ್ಗೆ 3 ಸಿ ಡಿ ಯನ್ನು ಕೊಟ್ಟಿದ್ದು, ಆ ಕಾಲಕ್ಕೆ ಸಾಕ್ಷಿದಾರರಾಗಿ ಚಾಸಾ 21 ಮತ್ತು 22 ಹಾಜರಿದ್ದು, ನಾನು ಕೊಟ್ಟ ಸಿ ಡಿ ಗೆ ಕ್ರಮ ಸಂಖ್ಯೆಃ 1 ಎಂದು ನಮೂದು ಮಾಡಿದ್ದು ನಾನು ಕೊಟ್ಟ ಸಿ ಡಿಯನ್ನು 2 ಪ್ರತಿಗಳಲ್ಲಿ ತಯಾರಿಸಲಾಗಿ ಅದಕ್ಕೆ ಕ್ರಮ ಸಂಖ್ಯೆಃ 2 ಮತ್ತು 3 ಎಂದು ಕೊಟ್ಟು ಅದಕ್ಕೆ ಆರ್ ಎಂಬ ಸೀಲು ಮಾಡಿ ಅದನ್ನು ಬಿಳಿ ಚೀಲದಲ್ಲಿ ಹಾಕಿ ಸೀಲು ಮಾಡಿರುತ್ತಾರೆ. ಸದರಿಯವರು 3ನೇ ಸಿ ಡಿಯನ್ನು ತಮ್ಮ ಬಳಿ ಇಟ್ಟುಕೊಂಡಿದ್ದು ಸದರಿ ಮಹಜರನ್ನು ಮ.12.00-12.45 ರ ಅವಧಿಯಲ್ಲಿ ಮಾಡಿರುತ್ತಾರೆ. ಸದರಿ ಸಿ ಡಿ ಗಳ ಮೇಲೆ ನನ್ನ ಹೆಸರು, ಸಾಕ್ಷಿದಾರರ ಹೆಸರನ್ನು ಬರೆದು ಸಹಿ ಪಡೆದು ಚೀಟಿಯನ್ನು ಅಂಟಿಸಿರುತ್ತಾರೆ.

5. ಸದರಿ ರೈಸ್ ಫುಲ್ಲಿಂಗ್ ವ್ಯವಹಾರಕ್ಕೆ ಸಂಬಂದ ನನ್ನ ಜೊತೆ 2 ರಿಂದ 4ನೇ ಆರೋಪಿತರು ಮಾತನಾಡಿದ್ದು, ಅದರಲ್ಲಿ ನಂದನ್ ರವರ ದೂರವಾಣಿ ಸಂಖ್ಯೆಃ 8277212564 ಹಾಗೂ ವಿಜಯ ಕುಮಾರ್ ರವರ ದೂರವಾಣಿ ಸಂಖ್ಯೆಃ 9535281262 ಹಾಗೂ ಮಹಮ್ಮದ್ ರಫಿ ರವರ ದೂರವಾಣಿ ಸಂಖ್ಯೆಃ 9206371931 ಇರುತ್ತದೆ.

6. ಸಾಕ್ಷಿಯು ದಿ፡ 24/03/2017 ರಂದು ತಾವು ನೀಡಿದ ದೂರಿನ ಪ್ರತಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 1 ಎಂದು, ಸಾಕ್ಷಿಯ ಸಹಿಯನ್ನು ನಿಪಿ 1(ಎ) ಎಂದು ಗುರುತಿಸಲಾಯ್ತು. ದಿ፡ 25/03/2017 ರಂದು ಹೊನ್ನೆಕುಡಿಗೆ ಗ್ರಾಮದ ಶ್ರೀ ಚಂಡಿಕೇಶ್ವರಿ ದೇವಸ್ಥಾನದ ಮುಂದೆ ಹಾದು ಹೋಗಿರುವ ಹಂತುವಾನಿ -ಹೊನ್ನೆಕುಡಿಗೆ ರಸ್ತೆಯಲ್ಲಿ ಮಾಡಿದ ಕೃತ್ಯ ಸ್ಥಳದ ಮಹಜರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 2 ಎಂದು, ಸಾಕ್ಷಿಯ ಸಹಿಯನ್ನು ನಿಪಿ 2 (ಎ) ಎಂದು ಗುರುತಿಸಲಾಯ್ತು. ನಿಪಿ 2 ಅನ್ನು ಮಾಡುವ ಕಾಲಕ್ಕೆ ತೆಗೆದ ಒಂದು ಭಾವಚಿತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 3 ಎಂದು ಗುರುತಿಸಲಾಯ್ತು. ದಿ፡ 30/04/2017 ರಂದು ಹೊಸದುರ್ಗ ಪಟ್ಟಣದ ಹೊರವಲಯದಲ್ಲಿರುವ ಸದ್ಗುರು ಸೇವಾಶ್ರಮದ ಬಳಿ ಜರುಗಿಸಿದ ಮಹಜರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 4 ಎಂದು, ಸಾಕ್ಷಿಯ ಸಹಿಯನ್ನು ನಿಪಿ 4 (ಎ) ಎಂದು ಗುರುತಿಸಲಾಯ್ತು. ನಿಪಿ 4 ಅನ್ನು ಮಾಡುವ ಕಾಲಕ್ಕೆ ತೆಗೆದ ಒಂದು ಭಾವಚಿತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 5 ಎಂದು ಗುರುತಿಸಲಾಯ್ತು. ದಿ፡ 30/04/2017 ರಂದು ಹೊಸದುರ್ಗ ತಾಲ್ಲೂಕು ಮುತ್ತೋಡು ಗ್ರಾಮದ ರಾಮ್ಕೋ ಸಿಮೆಂಟ್ ಲಿಮಿಟೆಡ್ ಸ್ಥಳದಲ್ಲಿ ಮಾಡಿದ ಮಹಜರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 6 ಎಂದು, ಸಾಕ್ಷಿಯ ಸಹಿಯನ್ನು ನಿಪಿ 6 (ಎ) ಎಂದು ಗುರುತಿಸಲಾಯ್ತು. ನಿಪಿ 6 ಅನ್ನು ಮಾಡುವ ಕಾಲಕ್ಕೆ ತೆಗೆದ 2 ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ 7 ಮತ್ತು 8 ಎಂದು ಗುರುತಿಸಲಾಯ್ತು. ದಿ፡ 19/04/2018 ರಂದು ಕುಮಾರ ಕೃಪ ಹೈಗ್ರೌಂಡ್ಸ್ ಬೆಂಗಳೂರು ಇಲ್ಲಿನ ಲಲಿತ್ ಅಶೋಕ್ ಹೋಟೆಲ್ ನ ಮೊದಲನೆ ಹಾಲ್ ನಲ್ಲಿ ಜರುಗಿಸಿದ ಮಹಜರನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ 9 ಎಂದು, ಸಾಕ್ಷಿಯ ಸಹಿಯನ್ನು ನಿಪಿ 9 (ಎ) ಎಂದು ಗುರುತಿಸಲಾಯ್ತು. ನಿಪಿ 9 ಅನ್ನು ಮಾಡುವ ಕಾಲಕ್ಕೆ ತೆಗೆದ ಭಾವಚಿತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 10 ಎಂದು ಗುರುತಿಸಲಾಯ್ತು. ದಿ፡ 19/04/2017 ರಂದು ಗಲ್ಫ್ ಕೋರ್ಸ್ ರಸ್ತೆಯಲ್ಲಿರುವ ವಿಂಡ್ಸರ್ ಮ್ಯಾನರ್ ಐ ಟಿ ಸಿ ಹೋಟೆಲ್ ಮುಂಭಾಗದ ರಿಸಪ್ಷನ್ ಹಾಲ್ ನಲ್ಲಿ ಮಾಡಿದ ಮಹಜರನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ 11 ಎಂದು, ಸಾಕ್ಷಿಯ ಸಹಿಯನ್ನು ನಿಪಿ 11 (ಎ) ಎಂದು ಗುರುತಿಸಲಾಯ್ತು. ನಿಪಿ 11 ಅನ್ನು ಮಾಡುವ ಕಾಲಕ್ಕೆ ತೆಗೆದ ಭಾವಚಿತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 12 ಎಂದು ಗುರುತಿಸಲಾಯ್ತು. ದಿ፡ 08/01/2019 ರಂದು ನ.ರಾ. ಪುರ ವೃತ್ತ ನಿರೀಕ್ಷಕರ ಕಚೇರಿಯಲ್ಲಿ ಮಾಡಿದ ಮಹಜರ್ ಅನ್ನು

ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ 13 ಎಂದು, ಸಾಕ್ಷಿಯ ಸಹಿಯನ್ನು ನಿಪಿ 13 (ಎ) ಎಂದು ಗುರುತಿಸಲಾಯ್ತು. ಸಾಕ್ಷಿಯು ಎರಡು ಸಿ ಡಿ ಗಳನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 14 ಮತ್ತು 15 ಎಂದು ಗುರುತಿಸಲಾಯ್ತು. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

**(ಈ ಹಂತದಲ್ಲಿ ಮುಂದುವರಿದ ಮುಖ್ಯವಿಚಾರಣೆಗೆ ಸಹಾಯಕ ಸರ್ಕಾರಿ ಅಭಿಯೋಜಕರು ಸಮಯ ಕೋರಿದ್ದು, ಸಮಯ ನೀಡಲಾಯ್ತು.)**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸ ಇ ಎ ಒ

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು: ನ.ರಾ.ಪುರ.

ಸಾಕ್ಷಿದಾರರ ಸಹಿ: